<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 197/2025**

| ಸಾಕ್ಷಿಯ ಹೆಸರು | ಮಾಸ್ಟರ್ ರೋಹನ್ | ಚಾಸಾಃ | ಫ್ರಾಸಾಃ |
|---|---|---|---|
| ತಂದೆಯ ಹೆಸರು | ಲೇಟ್ ದಿಲೀಪ್ ಕುಮಾರ್ | 3 | 1 |
| ವಯಸ್ಸು | 14 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **08.06.2026.** | |
| ಉದ್ಯೋಗ | ವಿದ್ಯಾರ್ಥಿ | | |
| ವಾಸ ಸ್ಥಳ | ಕಮಾಕ್ಷಿಪಾಳ್ಯ | | |

ಈ ಸಾಕ್ಷಿ ಅಪ್ರಾಪ್ತ ವಯಸ್ಸಿನ ಬಾಲಕನಾಗಿದ್ದು ಈ ಕೆಳಕಂಡ ಪ್ರಶ್ನೆಗಳನ್ನು ಕೇಳಲಾಯಿತು.

ಪ್ರಶ್ನೆ 1 : ಈ ದಿನ ನೀನು ಎಲ್ಲಿಗೆ ಬಂದಿದ್ದೀಯಾ ?

ಉತ್ತರ : ನ್ಯಾಯಾಲಯಕ್ಕೆ

ಪ್ರಶ್ನೆ 2 : ನ್ಯಾಯಾಲಯದ ಮುಂದೆ ನಿಜ ಹೇಳಬೇಕೋ ಸುಳ್ಳು ಹೇಳಬೇಕೋ ?

ಉತ್ತರ : ನಿಜ ಹೇಳಬೇಕು.

ಪ್ರಶ್ನೆ 3 : ಸುಳ್ಳು ಹೇಳಿದರೆ ಏನಾಗುತ್ತದೆ?

ಉತ್ತರ : ಸುಳ್ಳು ಹೇಳಿದರೆ ಶಿಕ್ಷ ವಿಧಿಸಲಾಗುತ್ತದೆ.

(ಈ ಸಾಕ್ಷಿಯು ಮೇಲೆ ಹೇಳಿದ ಪ್ರಶ್ನೆಗಳಿಗೆ ನೀಡಿದ ಉತ್ತರವನ್ನು ಗಮನಿಸಿದರೆ ಸಾಕಷ್ಟು ಲೋಕಿಕ ಜ್ಞಾನ ಪಡೆದಿದ್ದರಿಂದ ಈ ಸಾಕ್ಷಿಯನ್ನು ಅರ್ಹ ಸಾಕ್ಷಿಯೆಂದು ಪರಿಗಣಿಸಿ ಪ್ರಮಾಣ ವಚನ ಭೋಧಿಸಲಾಯಿತು )

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಚಾಸಾ. 1 ರವರು ಗೊತ್ತು. ಚಾಸಾ. 2 ರವರು ನನ್ನ ತಾಯಿ. ಮೃತ ದಿಲೀಪ್ ಕುಮಾರ್ ನನ್ನ ತಂದೆ. 1 ನೇ ಆರೋಪಿಯನ್ನು ಪರಪ್ಪನ ಅಗ್ರಹಾರದಿಂದ ವಿಡಿಯೋ ಕಾನ್ಫರೇನ್ಸ ಮೂಲಕ ಹಾಜರು ಪಡಿಸಿದ್ದು ಸಾಕ್ಷಿ ಗುರುತಿಸಿರುತ್ತಾರೆ. ನಮ್ಮ ತಂದೆಯವರು ಮೊದಲು ಸೋಲೂರಿನಲ್ಲಿ ಮನೆ ವಾಡಿದ್ದರು, ಅಲ್ಲಿ ನಮ್ಮ ಮನೆಯ ಪಕ್ಕದಲ್ಲಿ ಪಿರ್ಯಾದಿ ಅಮೃತ ರವರು ಮನೆ ಮಾಡಿದ್ದರು, ಆಗಾಗಿ ಅವರ ಪರಿಚಯ ಇದೆ. ದಿನಾಂಕ 27.04.2025 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ನಾನು, ನನ್ನ ತಂದೆ, ನನ್ನ ತಮ್ಮ ಹಾಗೂ ಚಾಸಾ. 1 ರವರು ಕೂಡ್ಲರುಕಡೆಯಿಂದ ನೆಲಮಂಗಲಕ್ಕೆ ಕಾರಿನಲ್ಲಿ ಹೋಗುತ್ತಿದ್ದೆವು. ರಾತ್ರಿ 8.30 ಕ್ಕೆ ನಾವು ನೆಲಮಂಗಲ ತಲುಪಿದೆವು. ಊಟ ಪಾರ್ಸೆಲ್ ಮಾಡಿಸಲು ನನ್ನ ತಂದೆ ಕಾರಿನಿಂದ ಇಳಿದರು. ಆ ಹೋಟೇಲ್ ಮಹಾಲಕ್ಷ್ಮೀ ಟೆಕ್ಸಟೈಲ್ಸ್ ಎದುರು ಇದೆ. ಯಾರೋ ಬಂದು ನಿಮ್ಮ ತಂದೆಯನ್ನು ಯಾರೋ ಅಟ್ಟಿಸಿಕೊಂಡು ಹೋಗುತ್ತಿದ್ದಾರೆ ನೋಡಿ ಎಂದು ಹೇಳಿದರು. ನಾನು ಕಾರಿನಿಂದ ಇಳಿದು ಹೋಗಿ ನೋಡಿದಾಗ ಇಬ್ಬರು ಅಟ್ಟಾಡಿಸಿಕೊಂಡು ಹೋಗುತ್ತಿದ್ದರು. ಒಬ್ಬ ಹಳದಿ ಬಣ್ಣದ ಟಿ-ಶರ್ಟ್ ಧರಿಸಿದ್ದರು ನಮ್ಮ ತಂದೆಗೆ ಬೀಸಿದ. ನನ್ನ ತಂದೆಯ ಕತ್ತಿನ ಬಳಿ ಏಟಾಯಿತು. ಮುಂದೆ ಓಡಿ ಹೋದರು, ನಾನು ಮುಂದೆ ಹೋಗಿ ನೋಡಿದೆ. ಅಲ್ಲಿ ಯಾರೋ ಕೆಂಪು ಬಣ್ಣದ ಟಿ-ಶರ್ಟ್ ಧರಿಸಿದ್ದವರನ್ನು ಅಪಹರಿಸಿಕೊಂಡು ಹೋದರು ಎಂದು ಹೇಳಿದರು. ನಾನು, ನನ್ನ ತಮ್ಮ ಮತ್ತು ಚಾಸಾ. 1 ರವರು ಠಾಣೆಗೆ ಹೋಗಿ ದೂರು ನೀಡಿದ್ದೆವು. ಆ ದಿನ ಹಳದಿ ಬಣ್ಣದ ಟಿ-ಶರ್ಟ್ ಧರಿಸಿದ್ದ ವ್ಯಕ್ತಿ ವರುಣ್. Instagram ನಲ್ಲಿ ನಾನು ವರಣ್ / 1 ನೇ ಆರೋಪಿಯನ್ನು ಫೋಟೋಗಳನ್ನು ನೋಡಿದ್ದೇನೆ. ಸದರಿ ದಿನ ಹಸಿರು ಬಣ್ಣದ ಟಿ-ಶರ್ಟ್ ಮತ್ತು ಜೀನ್ಸ ಪ್ಯಾಂಟ್ ಹಾಕಿದ್ದ ವ್ಯಕ್ತಿ ಸಹ ನಮ್ಮ ತಂದೆಯನ್ನು ಅಟ್ಟಿಸಿಕೊಂಡು ಹೋಗಿದ್ದ. 4 ನೇ ಆರೋಪಿ ದಿನೇಶ್ ರವರ ಮನೆಯಲ್ಲಿ ನಾವು ಬಾಡಿಗೆಗೆ ಇದ್ದೆವು. 3 ನೇ ಆರೋಪಿ ಆ ದಿನ ಕಾರು ಚಲಾನೆ ಮಾಡಿಕೊಂಡು ಹೋದವನು ಎಂದು ಪೋಲೀಸರು ಹೇಳಿದರು. 2 ನೇ ಆರೋಪಿ ಹಸಿರು ಬಣ್ಣದ ಶರ್ಟ ಹಾಗೂ ಪ್ಯಾಂಟ್ ಧರಿಸಿದ್ದ. ನ್ಯಾಯಾಲಯದ ಮುಂದೆ ಸೀಲ್ಡ್ ಕವರಿಂದ ತೆಗೆದು ತೋರಿಸಿದ ಮಚ್ಚನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಮು. ಮಾ. 1 ಎಂದು ಗುರುತಿಸಲಾಯಿತು. ನಾವು ಕಾರು ನಿಲ್ಲಿಸಿದ ಜಾಗದಿಂದ ಸ್ವಲ್ಪ ದೂರದಲ್ಲಿ ನನ್ನ ತಂದೆಯ ಮೊಬೈಲ್ ಮತ್ತು ಮಚ್ಚು ಬಿದಿತ್ತು. ಮಾರನೇ ದಿನ ಬೆಳಗ್ಗೆ ಪೋಲೀಸರು ಕರೆ

ಮಾಡಿ ನಿಮ್ಮ ತಂದೆ ಮೃತಪಟ್ಟಿದ್ದಾರೆ ತುಮಕೂರಿನ ವಿಜಯಪುರ ಗ್ರೌಂಡ್ ಬಳಿ ಶವ ಇದೆ ಎಂದು ಹೇಳಿದರು. ಯಾವ ಕಾರಣಕ್ಕೆ ಈ ಘಟನೆ ನಡೆಯಿತು ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ಮೊಬೈಲ್ FSL ನಿಂದ ಬರದೇ ಇರುವುದರಿಂದ ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು)

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.